# ವಾರ್ಡ್ ಸಭೆ ಸಂಖ್ಯೆ.07

ದಿನಾಂಕ: 02.01.2021 ರಂದು ಸಮಯ ಬೆಳಿಗ್ಗೆ 11.00 ಗಂಟೆಗೆ ವಾರ್ಡ್.ಸಂಖ್ಯೆ.44 ಮಾರಪ್ಪನಪಾಳ್ಯ ವಾರ್ಡ್ ಕಛೇರಿಯಲ್ಲಿ ವಾರ್ಡ್ ಕಮಿಟಿ ಸಭೆಯನ್ನು ಮಾನ್ಯ ನೋಡಲ್ ಅಧಿಕಾರಿ (ಅಧ್ಯಕ್ಷರು) ರವರು ಮತ್ತು ವಾರ್ಡ್ ಅಭಿಯಂತರರು (ಕಾರ್ಯದರ್ಶಿಗಳು) ಅಧ್ಯಕ್ಷತೆಯಲ್ಲಿ ಕರೆಯಲಾಯಿತು.

ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು

1. ಶ್ರೀಮತಿ ಕೆ ಸ್ವಯಂಪ್ರಭಾ, ಅದೀಕ್ಷಕ ಅಭಿಯಂತರರು (ಪಶ್ಚಿಮ) ವಲಯ **(ಅಧ್ಯಕ್ಷರು)**
2. ಶ್ರೀ ಎಲ್ ತಿಮ್ಮರಸು, ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರಂ ವಿಭಾಗ.
3. ಶ್ರೀ ನರಸಿಂಹ ಮೂರ್ತಿ ಸಹಾಯಕ ಕಂದಾಯ ಅಧಿಕಾರಿಗಳು ಮಹಾಲಕ್ಷ್ಮೀಪುರಂ ಉಪವಿಭಾಗ.
4. ಶ್ರೀ. ಧನಂಜಯ ಜಿ.ಟಿ ಸಹಾಯಕ ಅಭಿಯಂತರರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ **(ಕಾರ್ಯದರ್ಶಿ)**
5. ಶ್ರೀ ವೈ.ಆರ್ ವೆಂಕಟೇಶ್ ಸದಸ್ಯರು.
6. ಶ್ರೀಮತಿ ಪ್ರೇಮ ಸದಸ್ಯರು.
7. ಶ್ರೀಮತಿ ಮಹಾಲಕ್ಷ್ಮೀ ಸದಸ್ಯರು.
8. ಕುಮಾರಿ ಕಮಲ ಸದಸ್ಯರು.
9. ಶ್ರೀ ನಂಜೇಗೌಡ ಬಿ.ವಿ ಸದಸ್ಯರು.
10. ಶ್ರೀ ರಾಜೇಶ್ ಸದಸ್ಯರು.
11. ಶ್ರೀ ಬಿ.ಆರ್ ಪುಟ್ಟಸ್ವಾಮಿ ಸದಸ್ಯರು.
12. ಶ್ರೀ ಡಾ॥ ನಾಗೇಂದ್ರ ಸದಸ್ಯರು.
13. ಶ್ರೀ ವೆಂಕಟೇಶ್, ಹಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
14. ಶ್ರೀ ಜಿ.ಕೆ ವೆಂಕಟೇಶಯ್ಯ ಕೆಲಸ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
15. ಶ್ರೀ ಛಾಯಾಪತಿ ಎಂ, ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
16. ಶ್ರೀ ಸೋಮನಾಥ್ ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ
17. ಶ್ರೀ ದಿನೇಶ್ ಕುಮಾರ್ ಸಹಾಯಕ ಅಭಿಯಂತರರು, ಬೆಸ್ಕಾಂ ವಾರ್ಡ್ ಸಂಖ್ಯೆ.44, ಮಾರಪ್ಪನಪಾಳ್ಯ
18. ಶ್ರೀ ಶಿವರಾಂ ವಲಯ ಅರಣ್ಯಾ ಸಂರಕ್ಷಣಾಧಿಕಾರಿಗಳು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
19. ಶ್ರೀ ಲೋಕೇಶ್ ಪಶು ಸಂಗೋಪನ ಪರಿವೀಕ್ಷಕರು ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
20. ಶ್ರೀ ಶಿವರಾಂ ಬೀದಿ ದೀಪ ಗುತ್ತಿಗೆದಾರರು, ವಾರ್ಡ್ ಸಂಖ್ಯೆ.44 ಮಾರಪ್ಪನಪಾಳ್ಯ
21. ಶ್ರೀ ನಿಂಗರಾಜು ಎನ್, ಕಂದಾಯ ಪರಿವೀಕ್ಷಕರು ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.
22. ಶ್ರೀ ದರ್ಶನ್ ಕೆ.ಆರ್, ಮಾರ್ಷಲ್ ವಾರ್ಡ್.ಸಂಖ್ಯೆ.44, ಮಾರಪ್ಪನಪಾಳ್ಯ.

ಶ್ರೀ ಧನಂಜಯ ಜಿ.ಟಿ ಕಾರ್ಯದರ್ಶಿಗಳು ಮಾನ್ಯ ಅಧ್ಯಕ್ಷರು ಹಾಗೂ ಸಭೆಯಲ್ಲಿ ಹಾಜರಿದ್ದ ಇತರೆ ಸದಸ್ಯರನ್ನು, ಅಧಿಕಾರಿಗಳನ್ನು ಹಾಗೂ ಸಾರ್ವಜನಿಕರನ್ನು ಸಭೆಗೆ ಸ್ವಾಗತಿಸಲಾಯಿತು.

1. ಮಾನ್ಯ ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಸಭೆಯಲ್ಲಿ ಹಾಜರಿದ್ದ ಸದಸ್ಯರಿಗೆ, ಅಧಿಕಾರಿಗಳಿಗೆ ಹಾಗೂ ಸಾರ್ವಜನಿಕರಿಗೆ ಓದಿ ತಿಳಿಸಿದರು.

Scanned with CamScanner

2. ಮಾನ್ಯ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಸಾರ್ವಜನಿಕರಿಗೆ ಮೊದಲ ಆದ್ಯತೆ ನೀಡಿ ಸಮಸ್ಯೆಗಳನ್ನು ಸಭೆಗೆ ತಿಳಿಸುವಂತೆ ಸೂಚಿಸಿದರು.
3. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೋವಿದ್-19 ಸಂಬಂಧಿಸಿದ ಮಾಹಿತಿಯನ್ನು ಸಭೆಗೆ ತಿಳಿಸಿ ಎಂದು ಕೋರಿದರು. ಇದಕ್ಕೆ ಹಿರಿಯ ಆರೋಗ್ಯ ಪರಿವೀಕ್ಷಕರು ಕೋವಿದ್-19 ಸಂಬಂಧಿತ ಮಾಹಿತಿಯನ್ನು ಸಭೆಗೆ ಓದಿ ತಿಳಿಸಿದರು.
4. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ರವರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರಿಗೆ ಸೋಮೇಶ್ವರ ನಗರದ ಸ್ಯಾನಿಟರಿ ಲೈನ್ ಸಮಸ್ಯೆ ಬಗ್ಗೆ ಕೇಳಿದರು ಇದಕ್ಕೆ ಎಪಿಎಂಸಿ ಕಾರ್ಯದಶಿ ರವರು ರಸ್ತೆ ಅಗೆತವನ್ನು ಮಾಡಲು ಅಡ್ಡಿ ಮಾಡುತ್ತಿರುತ್ತಾರೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ನಿಮ್ಮ ಸಮಸ್ಯೆಯನ್ನು ಪತ್ರದ ಮುಖೇನ ಕೊಡಿ ಎಂದು ತಿಳಿಸಿದರು ಹಾಗೂ ಸಭೆಯಲ್ಲಿ ಹಾಜರಿದ್ದ ಸದಸ್ಯರು ಮತ್ತು ಅಧಿಕಾರಿಗಳು ಪ್ರಸ್ತಾಪಿತ ಸ್ಥಳಕ್ಕೆ ಮಾನ್ಯ ಸಚಿವರು ಬೇಟಿ ನೀಡಿ ಈ ಸಮಸ್ಯೆಯನ್ನು ಪರಿಹರಿಸಿ ಕೊಡಿ ಎಂದು ಮನವಿ ಮಾಡೋಣ ಎಂದು ತೀರ್ಮಾನಿಸಿದರು.
5. ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ಶಾಲಾ ಕಾಲೇಜುಗಳ ತೆರೆಯಲಾಗಿದೆ ಇದಕ್ಕೆ ಸರ್ಕಾರವು ಸೂಚಿಸಿರುವಂತೆ ಮಾರ್ಗಸೂಚಿಗಳನ್ನು ಪಾಲಿಸಿರುವ ವಿವರ ನೀಡುವಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಕೇಳಿದರು. ಹಿರಿಯ ಆರೋಗ್ಯ ಪರಿವೀಕ್ಷಕರು ಮಾಹಿತಿ ನೀಡಿದರು.
6. ವಾರ್ಡ್ ಅಭಿಯಂತರರು ಬೆಸ್ಕಾಂ ಅಧಿಕಾರಿಗಳಿಗೆ ತಾವು ರಸ್ತೆಗಳನ್ನು ಅಗೆಯುತ್ತಿರುತ್ತೀರಿ, ರಸ್ತೆ ಅಗೆತವನ್ನು ಮಾಡಲು ಅನುಮತಿ ಪಡೆದಿರುವ ದಾಖಲೆಗಳನ್ನು ನೀಡುವಂತೆ ಸಭಾ ಸೂಚನ ಪತ್ರದಲ್ಲಿ ಸೂಚಿಸಲಾಗಿತ್ತು ಆದರಂತೆ ದಾಖಲೆಗಳನ್ನು ನೀಡಿ ಎಂದು ತಿಳಿಸಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು.
7. ಶ್ರೀ ರಾಜೇಶ್ ಸದಸ್ಯರು ರವರು ವಾರ್ಡ್‌ನಲ್ಲಿ ಸುಮಾರು 15 ದಿನಗಳಿಂದ ನೀರಿನ ಸಮಸ್ಯೆ ಇದೆಕ್ಕೆ ಸಂಬಂದಪಟ್ಟ ಅಧಿಕಾರಿಗಳು ಸಮಸ್ಯೆಯನ್ನು ಪರಿಹರಿಸುತ್ತಿಲ್ಲ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಸಬಂದಪಟ್ಟ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳಿಗೆ ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು.
8. ವಾರ್ಡ್ ಅಭಿಯಂತರರು ಬೆಸ್ಕಾಂ ರವರು ಕೇಬಲ್ ಅಳವಡಿಸಲು ರಸ್ತೆ ಅಗೆತವನ್ನು ಮಾಡಿರುವ ಗುಂಡಿಗಳನ್ನು ಈ ಕೂಡಲೇ ಮುಚ್ಚಬೇಕು ಹಾಗೂ ರಸ್ತೆ ಅಗೆತಕ್ಕೆ ಅನುಮತಿ ಪಡೆದಿರುವ ದಾಖಲೆಗಳನ್ನು ನೀಡುವವರೆಗೂ ರಸ್ತೆ ಅಗೆತವನ್ನು ಮಾಡಬಾರದು ಎಂದು ಸೂಚಿಸಿದರು. ಬೆಸ್ಕಾಂ ಅಧಿಕಾರಿ ರವರು ಮತ್ತು ಸಂಬಂದಪಟ್ಟ ಗುತ್ತಿಗೆದಾರರು ರಸ್ತೆ ಅಗೆತವನ್ನು ನಿಲ್ಲಿಸುತ್ತೇವೆ ಹಾಗೂ ಅಗೆದ ಗುಂಡಿಗಳನ್ನು ಮುಚ್ಚಲು ದಿನಾಂಕ:10.01.2021 ರವರೆಗೆ ಕಾಲವಕಾಶವನ್ನು ನೀಡುವಂತೆ ಕೋರಿದರು. ಇದಕ್ಕೆ ಕಾರ್ಯಪಾಲಕ ಅಭಿಯಂತರರು ಮಹಾಲಕ್ಷ್ಮೀಪುರಂ ವಿಭಾಗ ಕಾಲವಕಾಶ ನೀಡಿದರು ಹಾಗೂ ಕಾಮಗಾರಿಯನ್ನು ನಿರ್ವಹಿಸುವ ಮುಂಚೆ ಸಂಬಂದಪಟ್ಟ ವಾರ್ಡ್ ಅಭಿಯಂತರರು (ಕಾಮಗಾರಿ ಇಲಾಖೆ) ರವರ ಗಮನಕ್ಕೆ ತರಬೇಕು ಎಂದು ತಿಳಿಸಿದರು.
9. ಶ್ರೀ ರಾಜೇಶ್ ಸದಸ್ಯರು ರವರು ಬೆಸ್ಕಾಂ ರವರು ಕೇಬಲ್‌ನನ್ನು 1.00 ಮೀಟರ್ ರಿಂದ 1.50 ಮೀಟರ್ ವರೆಗೆ ಹಾಳ ರಸ್ತೆಯನ್ನು ಅಗೆದು ತೆಗುಯುತ್ತಿದ್ದಾರೆ ಇದರಿಂದ ಮುಂದೆ ಒಳಚರಂಡಿ ಮತ್ತು ನೀರಿನ ಲೈನ್ ಅಳವಡಿಸುವಾಗ ತೊಂದರೆಯಾಗುತ್ತದೆ ಎಂದು ತಿಳಿಸಿರುತ್ತಾರೆ. ರಸ್ತೆ ಅಗೆಯಲು ಅನುಮತಿ ನೀಡಿರುವಾಗ ನೀಡಿರುವ ಮಾರ್ಗಸೂಚಿಯನ್ನು ನೀಡಿ ಅದರಲ್ಲಿರುವಂತೆಯೆ ಕೆಲಸ ಮಾಡುವಂತೆ ಸೂಚಿಸಿದರು.
10. ಶ್ರೀ ಡಾ॥ ನಾಗೇಂದ್ರ ಸದಸ್ಯರು ಕಂದಾಯ ವಸೂಲಿ ಬಾಕಿ ಇರುವ ಪಟ್ಟಿಯನ್ನು ನಾನು ಈ ಹಿಂದೆ ಸಭೆಯಲ್ಲಿ ಕೋರಲಾಗಿತ್ತು ಅದರಂತೆ ಕಂದಾಯ ವಸೂಲಿಗಾರರು ರವರು ಕಟ್ಟಡಕ್ಕೆ ಸಂಬಂಧಿಸಿದಂತೆ

Scanned with CamScanner

ಮಾಹಿತಿ ನೀಡಲಾಗಿರುತ್ತದೆ. ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು ಅದರಂತೆ ಮಾಹಿತಿಯನ್ನು ನೀಡಿ ಎಂದು ಕೇಳಿದರು. ಇದಕ್ಕೆ ಕಂದಾಯ ವಸೂಲಿಗಾರರು ರವರು ಖಾಲಿ ನಿವೇಶನಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ನೀಡಿದರು.

11. ಮಾನ್ಯ ಅಧ್ಯಕ್ಷರು ಕೋವಿಡ್-19 ನ ಸಂಬಂಧಿಸಿದಂತೆ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರು ಮತ್ತು ಲಿಂಕ್ ವರ್ಕರ್ಸ್, ಆಶಾ ಕಾರ್ಯಕರ್ತರು ಮತ್ತು ಇತರರು ನಿರ್ವಹಿಸುತ್ತಿರುವ ಕಾರ್ಯದ ಬಗ್ಗೆ ಮಾಹಿತಿ ಕೋರಿದರು.

12. ಕಾರ್ಯದರ್ಶಿಗಳು ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್‌ನಲ್ಲಿ ವಿದ್ಯುತ್‌ಕಂಬಗಳಿಂದ ಜೋತು ಬಿದ್ದ ಕೇಬಲ್‌ಗಳನ್ನು ತಗಿಸುವಂತೆ ಈ ಹಿಂದೆ ಸೂಚಿಸಲಾಗಿರುತ್ತದೆ ಇದಕ್ಕೆ ಸಂಬಂಧಿಸದಂತೆ ಕೈಗೊಂಡ ಕ್ರಮದ ಬಗ್ಗೆ ಕೇಳಿದರು. ಇದಕ್ಕೆ ಬೆಸ್ಕಾಂ ಅಧಿಕಾರಗಳು ಕೇಬಲ್‌ಗಳನ್ನು ತೆರವುಗೊಳಿಸಲು ಒಂದು ಟ್ರ್ಯಾಕ್ಟರ್ ಮತ್ತು ಕೂಲಿ ಕಾರ್ಮಿಕರು ಮೂರು ದಿನಗಳ ಕಾಲ ಬೇಕು ಎಂದು ತಿಳಿಸಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಪತ್ರದ ಮುಖೇನ ನೀಡಿ ಸಂಬಂದಪಟ್ಟವರಿಗೆ ಸೂಚಿಸಲಾಗುವುದು ಎಂದು ತಿಳಿಸಿದರು.

13. ಒಬ್ಬ ಶಿಕ್ಷಕರು ಕೋವಿಡ್-19 ರ ಕಾರ್ಯ ನಿರ್ವಹಿಸುತ್ತಿರುವ ಶಿಕ್ಷಕರ ಪಟ್ಟಿಯನ್ನು ನೀಡಿ ಶಾಲಾ ಕಾಲೇಜುಗಳು ಪ್ರಾರಂಭಗೊಂಡಿರುವುದರಿಂದ ಸದರಿಯವರನ್ನು ಕೋವಿಡ್-19 ಕರ್ತವ್ಯದಿಂದ ಬಿಡುಗಡೆ ಮಾಡಲು ಕೋರಿದರು. ಇದಕ್ಕೆ ಮಾನ್ಯ ಅಧ್ಯಕ್ಷರು ಕಂದಾಯ ಅಧಿಕಾರಿಗಳು ತಮ್ಮನ್ನು ಕರ್ತವ್ಯದಿಂದ ಬಿಡುಗಡೆ ಮಾಡಬೇಕಾಗಿರುತ್ತದೆ ಆದ್ದರಿಂದ ಸದರಿ ರವರ ಕಛೇರಿಗೆ ಭೇಟಿ ನೀಡಿ ಎಂದು ತಿಳಿಸಿದರು.

14. ಮಾನ್ಯ ಅಧ್ಯಕ್ಷರು ಕಂದಾಯ ವಸೂಲಿಗಾರರಿಗೆ ವಾರ್ಡ್‌ನಲ್ಲಿ ಒಟ್ಟು ಎಷ್ಟು ಕಟ್ಟಡಗಳಿವೆ, ಎಷ್ಟು ಖಾಲಿ ನಿವೇಶನಗಳಿವೆ ಎಂಬ ಮಾಹಿತಿಯನ್ನು ಕಿರಿಯ ಆರೋಗ್ಯ ಪರಿವೀಕ್ಷಕರಿಗೆ ನೀಡಲು ಸೂಚಿಸಿದರು ಇದರಿಂದ ಪೌರಕಾರ್ಮಿಕರನ್ನು ನಿಯೋಜಿಸಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಇದಕ್ಕೆ ಕಂದಾಯ ವಸೂಲಿಗಾರರು ನೀಡುತ್ತೇನೆ ಆದರೆ ಸ್ವಲ್ಪ ಕಾಲಾವಕಾಶ ಬೇಕು ಎಂದು ಸಭೆಗೆ ತಿಳಿಸಿದರು.

15. ಮಾನ್ಯ ಅಧ್ಯಕ್ಷರು ಬೆಸ್ಕಾಂ ಅಧಿಕಾರಿಗಳಿಗೆ ವಾರ್ಡ್‌ನಲ್ಲಿ ಒಂದು ಮನೆಗೆ ಒಂದು ಮೀಟರ್‌ನ್ನು ಅಳವಡಿಸಿರುತ್ತೀರಿ ಅದರಂತೆ ಒಟ್ಟು ಎಷ್ಟು ಮನೆಗಳಿವೆ ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿ ಎಂದು ಕೋರಿದರು. ಇದಕ್ಕೆ ಬೆಸ್ಕಾಂ ಅಧಿಕಾರಿಗಳು ಮುಂದಿನ ಸಭೆಯಲ್ಲಿ ನೀಡುತ್ತೇನೆ ಎಂದು ತಿಳಿಸಿದರು.

16. ಹಿಂದಿನ ಸಭೆಯಲ್ಲಿ ಶ್ರೀ ಡಾ॥ ನಾಗೇಂದ್ರ ಸದಸ್ಯರು ರವರು ವಾರ್ಡ್‌ನಲ್ಲಿ ಕೊಳವೆ ಬಾವಿಗಳಿಗೆ ಸಂಬಂದಪಟ್ಟಂತೆ ಚಾಲ್ತಿಯಲ್ಲಿರುವ ಕೊಳವೆ ಬಾವಿ, ಹಾಳಾಗಿರುವ ಕೊಳವೆ ಬಾವಿಗಳ ಮಾಹಿತಯನ್ನು ಕೋರಿರುತ್ತಾರೆ ಅದರಂತೆ ವಾರ್ಡ್ ಅಭಿಯಂತರರಿಂದ ಮಾಹಿತಿಯನ್ನು ಪಡೆದು ಕೊಂಡರು.

17. ಸಾರ್ವಜನಿಕರು ಈಶ್ವರ ದೇವಸ್ಥಾನದ ಹತ್ತಿರ ಕೊಳವೆ ಬಾವಿ ನೀರು ಕೃಷ್ಣಪ್ಪ ಎಂಬುವರ ಮನೆಗೆ ಮಾತ್ರ ನೀರು ಹೋಗಿತ್ತಿದೆ ಉಳಿಕೆ ಮನೆಗಳಿಗೆ ನೀರು ಬರುತ್ತಿಲ್ಲ ಎಂದು ತಿಳಿಸಿದರು. ಇದಕ್ಕೆ ವಾರ್ಡ್ ಅಭಿಯಂತರರು ಸಮಸ್ಯೆಯನ್ನು ಪರಿಹರಿಸಲು ಕ್ರಮ ಕೈಗೊಳ್ಳುತ್ತೇವೆ ಎಂದು ತಿಳಿಸಿದರು.

18. ಈಶ್ವರ ದೇವಸ್ಥಾನದ ಹತ್ತಿರ ಟವರ್ ನಿರ್ಮಾಣ ಮಾಡಿರುತ್ತಾರೆ ಇದರಿಂದ ಗರ್ಭಿಣಿ ಸ್ತ್ರೀಯರಿಗೆ ಮತ್ತು ಮಕ್ಕಳಿಗೆ ಸ್ಥಳೀಯ ನಿವಾಸಿಗಳು ಅನಾರೋಗ್ಯದಿಂದ ಬಳಲುತ್ತಿದ್ದಾರೆ ಆದ್ದರಿಂದ ಸದರಿ ಟವರ್‌ನ್ನು ತೆರವುಗೊಳಿಸಲು ಮನವಿ ಮಾಡಿದರು. ಇದಕ್ಕೆ ವಾರ್ಡ್ ಅಭಿಯಂತರರು ಈಗ ನಾವು ತರೆವುಗೊಳಿಸಲು ಕಾನೂನಿನ ರೀತಿ ಸಾದ್ಯವಿಲ್ಲ, ಹಾಗೂ ತೆರವುಗೊಳಿಸದರೆ ಅದು ಕಾನೂನು

Scanned with CamScanner

ಭಾಹಿರವಾಗುತ್ತದೆ ಆದ್ದರಿಂದ ಸದರಿ ಕಟ್ಟಡದ ಮಾಲೀಕರು ಒಪ್ಪಿದಲ್ಲಿ ಅವರೇ ತೆರವುಗೊಳಿಸಬಹುದಾಗಿರುತ್ತದೆ ಎಂದು ತಿಳಿಸಿದರು.

19. ಸಾರ್ವಜನಿಕರು ರವರು ಬೀದಿ ಬದಿ ವ್ಯಾಪಾರಿಗಳು ಶಂಕರನಗರದ ಮುಖ್ಯರಸ್ತೆಯಲ್ಲಿ ಮುಂಜಾನೆ ಗಲಾಟೆ ಮಾಡುತ್ತಿರುತ್ತಾರೆ ಇದರಿಂದ ಶಂಕರನಗರದ ಮುಖ್ಯರಸ್ತೆಯ ನಿವಾಸಿಗಳಿಗೆ ತುಂಬಾ ತೊಂದರೆಯಾಗುತ್ತಿದೆ, ವಾಹನ ನಿಲುಗಡೆ ಇರುವವರು ಅಂಗಡಿಗಾಗಿ ಬಾಡಿಗೆ ನೀಡುತ್ತಿರುತ್ತಾರೆ ಮತ್ತು ಕೋತಿಗಳ ಹಾವಳಿ ಹೆಚ್ಚಾಗಿದೆ ಎಂದು ತಿಳಿಸಿದರು ಇದಕ್ಕೆ ಮಾನ್ಯ ಅಧ್ಯಕ್ಷರು ಕೋತಿಗಳ ಹಾವಳಿಗಳ ಬಗ್ಗೆ ಅರಣ್ಯ ಇಲಾಖೆ ಅಧಿಕಾರಿಗಳಿಗೆ ತಿಳಿಸುತ್ತೇವೆ ಎಂದು ತಿಳಿಸಿದರು. ಕಾರ್ಯದರ್ಶಿಗಳು ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ಪ್ರಸ್ತಾಪಿತ ಪ್ರದೇಶದಲ್ಲಿ ಕಮರ್ಷಿಯಲ್ ಕಟ್ಟಡಗಳಿಗೆ ನೋಟೀಸ್ ನೀಡುವಂತೆ ತಿಳಿಸಿದರು.

20. ಮಾರ್ಷಲ್ ರವರು ವಾರ್ಡ್ ಸಂಖ್ಯೆ.68 ರಲ್ಲಿರುವ ನಿವಾಸಿಗಳು ಕಸವನ್ನು ವಾರ್ಡ್ ಸಂಖ್ಯೆ.44 ರಲ್ಲಿ ಕಸ ಹಾಕುತ್ತಿರುತ್ತಾರೆ ಮತ್ತು ಆ ಕಸವನ್ನು 44 ಕ್ಕೆ ಸಂಬಂದಪಟ್ಟವರು ತೆರವುಗೊಳಿಸಲಾಗುತ್ತಿದೆ ಎಂದು ತಿಳಿಸಿದರು. ಇದಕ್ಕೆ ಮಾನ್ಯ ಕಾರ್ಯದರ್ಶಿಗಳು ವಾರ್ಡ್ ಸಂಖ್ಯೆ.68 ಮತ್ತು ವಾರ್ಡ್ ಸಂಖ್ಯೆ.44 ಕ್ಕೆ ಸಂಬಂದಪಟ್ಟವರು ಸ್ಥಳಕ್ಕೆ ಬೇಟಿ ನೀಡಿ ಸಮಸ್ಯೆಯನ್ನು ಪರಿಹರಿಸುವಂತೆ ಸೂಚಿಸಿದರು.

21. ಶ್ರೀ ಪುಟ್ಟಸ್ವಾಮಿ ಸದಸ್ಯರು ರವರು ಅಂತಿಮವಾಗಿ ಸಭೆಗೆ ಹಾಜರಿದ್ದ ಸದಸ್ಯರು, ಅಧಿಕಾರಿಗಳು ಮತ್ತು ಸಾರ್ವಜನಿಕರಿಗೆ ವಂದನೆಗಳು ಹೇಳುತ್ತಾ ಸಭೆಯನ್ನು ಮುಕ್ತಾಯಗೊಳಿಸಿದರು.

ಅಧ್ಯಕ್ಷರು

K. [signature]

ವಾರ್ಡ್ ಕಮಿಟಿ, ವಾರ್ಡ್.ಸಂಖ್ಯೆ.44

ಮಾರಪ್ಪನಪಾಳ್ಯ

Scanned with CamScanner